ಯೋಜನೆಯನ್ನು ತಯಾರಿಸುವರು.

ಆ) ಅಂದಾಜು ವೆಚ್ಚ ರೂ.350-00 ಕೋಟಿ.

ಇ) ಪೂರ್ವಭಾವಿಯಾಗಿ ವಿಶ್ವಬ್ಯಾಂಕ್ ತಂಡದವರೊಂದಿಗೆ ಮಾತು-ಕತೆ ಜರುಗಿತು. ಆದರೆ ಪ್ರಾಜೆಕ್ಟ್ ಇನ್ನೂ ಸಲ್ಲಿಸಿಲ್ಲ.

ಈ) ವಿಶ್ವ ಬ್ಯಾಂಕ್ ತನ್ನದೇ ಆದ ಕೆಲವು ನಿಬಂದನೆಗಳನ್ನು ಒಳಪಡಿಸಿದ್ದರಿಂದ ಈ ಪ್ರಾಜೆಕ್ಟ್‌ನ್ನು ಸಲ್ಲಿಸಲು ಸಾಧ್ಯವಾಗಲಿಲ್ಲ.

ರಾಜ್ಯದಲ್ಲಿ ಗ್ರಾಹಕರ ದೂರು ಹಿತರಕ್ಷಣಾ ನ್ಯಾಯಾಲಯಗಳನ್ನು ಹೊಂದಿರುವ ಜಿಲ್ಲೆಗಳು.

920(377) ಶ್ರೀ.ಆರ್.ದಯಾನಂದರಾವ್(ಗಾಂಧಿನಗರ):- ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಗ್ರಾಹಕರ ದೂರು ಹಿತರಕ್ಷಣಾ ನ್ಯಾಯಾಲಯಗಳನ್ನು ಹೊಂದಿರುವ ಜಿಲ್ಲೆಗಳ ಸಂಖ್ಯೆ ಎಷ್ಟು?

ಆ) ಇಂತಹ ನ್ಯಾಯಾಲಯಗಳು ಇಲ್ಲದಿರುವ ಜಿಲ್ಲೆಗಳು ಯಾವುವು?

ಇ) ಎಲ್ಲಾ ಜಿಲ್ಲೆಗಳಲ್ಲೂ ಗ್ರಾಹಕರ ದೂರು ಹಿತರಕ್ಷಣಾ ನ್ಯಾಯಾಲಯಗಳನ್ನು ಸ್ಥಾಪಿಸಲು ಉದ್ದೇಶಿಸಿರುವ ಕ್ರಮಗಳೇನು.

ಶ್ರೀ ಮನೋರಮಾ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):-

ಅ) ಎಲ್ಲಾ ಇಪ್ಪತ್ತು ಜಿಲ್ಲೆಗಳು.

ಆ) ಯಾವುದೂ ಇಲ್ಲ.

ಇ) ಉದ್ಭವಿಸುವುದಿಲ್ಲ.

ವಿದೇಶದಲ್ಲಿರು ಅನಿವಾಸಿ ಭಾರತೀಯರು ನಮ್ಮ ರಾಜ್ಯದಲ್ಲಿ ಬಂಡವಾಳ ಹೂಡಲು ಪ್ರೇರಿಪಿಸಿರುವ ಬಗ್ಗೆ.

924(1647) ಶ್ರೀ ನಾರಾಯಣರಾವ್‌ಮನಹಳ್ಳಿ(ಬೀದರ್):- ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಹಿಂದಿನ ಮುಖ್ಯಮಂತ್ರಿಗಳು ವಿದೇಶದಲ್ಲಿರುವ ಅನಿವಾಸಿ ಭಾರತೀಯರನ್ನು ನಮ್ಮ ರಾಜ್ಯದಲ್ಲಿ ಬಂಡವಾಳ ಹೂಡಲು ಪ್ರೇರೇಪಿಸಲು ಹೊರದೇಶಕ್ಕೆ ಬೇಟಿ ನೀಡಿದ್ದರೆ.

2) ಹಾಗಿದ್ದರೆ, ವಿದೇಶದಲ್ಲಿರುವ ಎಷ್ಟು ಜನ ಅನಿವಾಸಿ ಭಾರತಿಯರು ನಮ್ಮ ರಾಜ್ಯದಲ್ಲಿ ಎಷ್ಟು ಹಣವನ್ನು ತೊಡಗಿಸಿದ್ದಾರೆ.

ಶ್ರೀ ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):-

1) ಹೌದು

2) ಮಾನ್ಯ ಮಾಜಿ ಮುಖ್ಯಮಂತ್ರಿಗಳ ಭೇಟಿಯ ಕಾಲದಲ್ಲಿ ಎರಡು ಜಲ ವಿದ್ಯುತ್ ಮತ್ತು ಆರು ಥರ್ಮಲ್ ಪ್ರಾಜೆಕ್ಟ್ ಬಗ್ಗೆ ತಿಳುವಳಿಕೆ ಪತ್ರಗಳಿಗೆ ಸಹಿ ಹಾಕಲಾಗಿದೆ. ಅದಾದ ನಂತರ ಅಮೆರಿಕಾದ ಮೆ: ಕೈತ್‌ನೆಸ್ ಕಂಪನಿಯು ದಾಂಡೇಲಿ ಮತ್ತು ಬೇಡ್ತಿ ಜಲ ವಿದ್ಯುತ್ ಉತ್ಪಾದಿಸುವ ಬಗ್ಗೆ ಕರ್ನಾಟಕ ವಿದ್ಯುತ್ ನಿಗಮದ ಜೊತೆ ಬೆಂಗಳೂರಿನಲ್ಲಿ ಸಂಯುಕ್ತ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. ಈ ಕೆಲಸದ ಕಾರ್ಯ ಇನ್ನೂ ತೆಗೆದು ಕೊಳ್ಳಬೇಕಾಗಿದೆ. ಈ ಪ್ರಾಜೆಕ್ಟ್ ಬಗ್ಗೆ ವಿವರವಾದ ವರದಿ ತಯಾರಿಸುವ ಮುನ್ನ ಕರ್ನಾಟಕ ವಿದ್ಯುತ್ ಮಂಡಳಿ ಎಷ್ಟರ ಮಟ್ಟಿಗೆ ಭಾಗವಹಿಸುತ್ತಾರೆಎಂಬುದರ ಬಗ್ಗೆ ತೀರ್ಮಾನಿಸಿದ ನಂತರ ವಿದೇಶಿ ಬಂಡವಾಳದ ಬಗ್ಗೆ ಸರಿಯಾದ ಮಾಹಿತಿ ಸಿಗುವುದು: ಆದರೂ ಹಿಂದಿನ ಸರ್ಕಾರವು ಸಹಿ ಹಾಕಿರುವ ತಿಳುವಳಿಕೆ ಪತ್ರಗಳನ್ನು ಈಗಿನ ಸರ್ಕಾರವು ಪುನರ್ ಪರಿಶೀಲಿಸಲಾಗುತ್ತಿದೆ.

ರಾಜ್ಯ ಹಣಕಾಸು ಸಂಸ್ಥೆಯಿಂದ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರಿಗೆ ನೀಡಿರುವ ಸಾಲ.

928(965) ಶ್ರೀ ಬಿ.ಹೆಚ್.ಲಕ್ಷ್ಮಣಯ್ಯ(ಬೇಲೂರು):- ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯ ಹಣಕಾಸು ನಿಗಮ ಈ ವರ್ಷ ಕೊಟ್ಟಿರುವ ಸಾಲದ ಮೊಬಲಗೆಷ್ಟು ಮತ್ತು ಎಷ್ಟು ಜನಕ್ಕೆ ಸಾಲ ಕೊಟ್ಟಿದೆ;

ಆ) ಇದರಲ್ಲಿ ಪರಿಶಷ್ಟ ಜಾತಿ ಪರಿಶಿಷ್ಟ ಪಂಗಡ ಜನರೆಷ್ಟು ಹಾಗೂ ಮಂಜೂರಾತಿಯಾಗಿರುವ ಸಾಲದ ಮೊಬಲಗೆಷ್ಟು;

ಇ) ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರಿಗೆ ಸಾಲ ಕೊಡುವಾಗ ಏನಾದರೂ ವಿನಾಯಿತಿಗಳಿವೆಯೆ?

ಶ್ರೀ ಎಂ. ವೀರಪ್ಪಮೊಯಿಲಿ(ಮುಖ್ಯಮಂತ್ರಿಗಳು):-

ಅ) ರಾಜ್ಯ ಹಣಕಾಸು ನಿಗಮ ಈ ವರ್ಷ ಅಂದರೆ 1-4-1992ರಿಂದ ಡಿಸೆಂಬರ್ 1992ರ ಅಂತ್ಯದವರೆವಿಗೆ 10,754 ಕೈಗಾರಿಕಾ ಉದ್ಯೋಗಿಗಳಿಗೆ 256.76 ಕೋಟಿ ರೂಗಳನ್ನು ಮಂಜೂರು ಮಾಡಿದೆ.

ಆ) ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರಿಗೆ ಮಂಜೂರು ಮಾಡಿರುವ ವಿವರಣೆಯನ್ನು ಕೆಳಗೆ ಕೊಟ್ಟಿದೆ:

	ಉದ್ಯಮಿಗಳ ಸಂಖ್ಯೆ	ಮಂಜೂರಾದ ಮೊಬಲಗು (ಕೋಟಿ ರೂಗಳಲ್ಲಿ)
ಪರಿಶಿಷ್ಟ ಜಾತಿ	1434	8.25
ಪರಿಶಿಷ್ಟ ಪಂಗಡ	88	1.08

ಇ) ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಉದ್ಯಮಿಗಳಿಗೆ ಸಾಲ ಮಂಜೂರಾತಿಯಲ್ಲಿ ಈ ಕೆಳಗಿನ ವಿನಾಯಿತಿಯನ್ನು ಕೊಡಲಾಗುತ್ತದೆ